ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 579
ಸದಸ್ಯರ ಹೆಸರು	: ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	: 16.09.2021
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಉತ್ತರ ಕರ್ನಾಟಕದ ಬಹು ನಿರೀಕ್ಷಿತ ಮಹದಾಯಿ ಯೋಜನೆಯನ್ನು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಕೈಗೆತ್ತಿಕೊಂಡು ವಿಳಂಬ ಮಾಡದೇ ಯೋಜನೆಯನ್ನು ಪೂರ್ಣಗೊಳಿಸಿ ಈ ಭಾಗದ ಜನರಿಗೆ ನೀರೊದಗಿಸುವ ವಿಚಾರ ಸರ್ಕಾರದ ಮುಂದಿದೆಯೇ;	ಹೌದು.
ಆ.	ಹಾಗಿದ್ದಲ್ಲಿ, ಮಹದಾಯಿ ಯೋಜನೆಯನ್ನು ಪೂರ್ಣಗೊಳಿಸಿ ಜನರ ಆಶಯ ಪೂರೈಸಲು ಸರ್ಕಾರ ತೆಗೆದುಕೊಂಡು ಕ್ರಮಗಳೇನು (ವಿವರ ನೀಡುವುದು)	ದಿನಾಂಕ:27/02/2020 ರಂದು ಕೇಂದ್ರ ಸರ್ಕಾರವು ಗ್ಯಾಜೆಟ್ ಪ್ರಕಟಣೆ ಮಾಡಿರುವ ಮಹದಾಯಿ ಜಲ ವಿವಾದ ನ್ಯಾಯಾಧೀಕರಣದ ದಿನಾಂಕ:14/08/2018ರ ಅಂತಿಮ ತೀರ್ಪಿನನ್ವಯ ಕಳಸಾ ನಾಲಾ ತಿರುವು ಯೋಜನೆಗೆ 1.72 ಟಿ.ಎಂ.ಸಿ. ಹಾಗೂ ಬಂಡೂರ ನಾಲಾ ತಿರುವು ಯೋಜನೆಗೆ 2.18 ಟಿ.ಎಂ.ಸಿ. ನೀರಿನ ಹಂಚಿಕೆ ಮಾಡಲಾಗಿರುತ್ತದೆ. ನ್ಯಾಯಾಧಿಕರಣದ ಹಂಚಿಕೆಗೆ ಅನುಗುಣವಾಗಿ ಕಳಸಾ ನಾಲಾ ತಿರುವು ಯೋಜನೆಗೆ ರೂ.885.80 ಕೋಟಿಗಳ ಹಾಗೂ ಬಂಡೂರ ನಾಲಾ ಯೋಜನೆಯ ರೂ. 791.50 ಕೋಟಿಗಳ ಪರಿಷ್ಕೃತ ಅಂದಾಜು ಮೊತ್ತಗಳಿಗೆ ಸರ್ಕಾರದ ದಿನಾಂಕ: 10.07.2020 ರ ಆದೇಶದಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಗಳ ಪೂರ್ವ ಕಾರ್ಯ ಸಾಧ್ಯತಾ ವರದಿ (PFR) ಯನ್ನು ಕೇಂದ್ರ ಜಲ ಆಯೋಗಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಕಳಸ ನಾಲಾ-ಬಂಡೂರ ನಾಲಾ ತಿರುವು ಯೋಜನೆಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯವಿರುವ ಎಲ್ಲಾ ತಿರುವಳಿಗಳನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆ.
ಇ.	ಮಹದಾಯಿ ವಿವಾದದ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಾಂತರ ತೀರ್ಪಿನ ವಿವರವೇನು ಎಷ್ಟೆಷ್ಟು ಪ್ರಮಾಣದ ನೀರು ಹಂಚಿಕೆಯಾಗಿದೆ; (ವಿವರ ಒದಗಿಸುವುದು)	ಮಹದಾಯಿ ನ್ಯಾಯಾಧೀಕರಣವು ಮಹದಾಯಿ ನದಿಯ ಒಟ್ಟು ಇಳುವರಿಯನ್ನು 75 % ಅವಲಂಬನೆ ಮೇಲೆ 188.06 ಟಿ.ಎಂ.ಸಿ. ಎಂದು ಅಂದಾಜಿಸಿದೆ. ಸದರಿ ಪ್ರಮಾಣದಲ್ಲಿ ಕಣಿವೆ ರಾಜ್ಯಗಳಿಗೆ ಮಾಡಿರುವ ನೀರಿನ ಹಂಚಿಕೆಯ ವಿವರಗಳು ಕೆಳಗಿನಂತಿವೆ: 1. ಗೋವಾ : 24.00 ಟಿ.ಎಂ.ಸಿ (ಹಾಲಿ ಬಳಕೆಯಾಗುತ್ತಿರುವ 9.395 ಟಿ.ಎಂ.ಸಿ.ಗೆ ಹೆಚ್ಚುವರಿಯಾಗಿ) 2. ಕರ್ನಾಟಕ : 13.42 ಟಿ.ಎಂ.ಸಿ 3. ಮಹಾರಾಷ್ಟ್ರ : 1.33 ಟಿ.ಎಂ.ಸಿ

<table>
<tr>
<td></td>
<td></td>
<td>
ರಾಜ್ಯಕ್ಕೆ ಹಂಚಿಕೆಯಾಗಿರುವ 13.42 ಟಿ.ಎಂ.ಸಿ.ಯ ವಿವರಗಳು ಕೆಳಗಿನಂತಿವೆ:
<table>
<tr><td>1.</td><td>ಕಳಸಾ ನಾಲಾ ತಿರುವು ಯೋಜನೆ</td><td>1.72</td></tr>
<tr><td>2</td><td>ಬಂಡೂರಾ ನಾಲಾ ತಿರುವು ಯೋಜನೆ</td><td>2.18</td></tr>
<tr><td>3.</td><td>ಮಹದಾಯಿ ಜಲ ವಿದ್ಯುತ್ ಯೋಜನೆ</td><td>8.02</td></tr>
<tr><td>4.</td><td>ಮಹದಾಯಿ ಕಣಿವೆಯೊಳಗಿನ ಪ್ರದೇಶಗಳ ನೀರಾವರಿ, ಕುಡಿಯುವ ನೀರಿನ ಬಳಕೆ ಮತ್ತು ಇತರೆ ಸೌಲಭ್ಯಗಳಿಗಾಗಿ</td><td>1.50</td></tr>
</table>
</td>
</tr>
<tr>
<td>ಈ.</td>
<td>ಮಹದಾಯಿ ಯೋಜನೆಯನ್ನು ಪೂರ್ಣಗೊಳಿಸುವುದರಿಂದ ಎಷ್ಟು ನಗರಗಳಿಗೆ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲಾಗುವುದು ಅವುಗಳು ಯಾವುವು ಇತರೆ ಏನೆಲ್ಲಾ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.</td>
<td>ಕಳಸಾ–ಬಂಡೂರ ನಾಲಾ ತಿರುವು ಯೋಜನೆಗಳಿಂದ ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳು ಮತ್ತು ಮಾರ್ಗದಲ್ಲಿ ಬರುವ ಕುಂದಗೋಳ ಪಟ್ಟಣ ಹಾಗೂ ಗ್ರಾಮಗಳು ಹಾಗೂ ಕುಡಿಯುವ ನೀರು ಒದಗಿಸಲು ಯೋಜಿಸಲಾಗಿರುತ್ತದೆ.</td>
</tr>
<tr>
<td>ಉ.</td>
<td>ಮಹದಾಯಿ ಯೋಜನೆಗೆ ತಗಲುವ ಅಂದಾಜು ವೆಚ್ಚ ಎಷ್ಟು; ಇದಕ್ಕಾಗಿ ಎಷ್ಟು ಅನುದಾನ ಒದಗಿಸಲಾಗಿದೆ; ಒದಗಿಸಿದ ಅನುದಾನದಲ್ಲಿ ಏನೆಲ್ಲಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)</td>
<td>ಕಳಸಾ ನಾಲಾ ತಿರುವು ಯೋಜನೆಗೆ ರೂ.885.80 ಕೋಟಿಗಳ ಹಾಗೂ ಬಂಡೂರ ನಾಲಾ ಯೋಜನೆಯ ರೂ. 791.50 ಕೋಟಿಗಳ ಪರಿಷ್ಕೃತ ಅಂದಾಜು ಮೊತ್ತಗಳಿಗೆ ಸರ್ಕಾರದ ದಿನಾಂಕ: 10.07.2020 ರ ಆದೇಶದಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿದೆ
2021–22ನೇ ಸಾಲಿನಲ್ಲಿ ಕಳಸಾ ನಾಲಾ ಹಾಗೂ ಬಂಡೂರ ನಾಲಾ ತಿರುವು ಯೋಜನೆಗಳಿಗಾಗಿ ಒಟ್ಟು ರೂ. 141.30 ಕೋಟಿಗಳ ಅನುದಾನದ ಅವಕಾಶವನ್ನು ಕಲ್ಪಿಸಲಾಗಿದೆ.

ಕಳಸಾ ನಾಲಾ ಯೋಜನೆಯ ಕೂಡು ಕಾಲುವೆ ಕಾಮಗಾರಿಯು ಬಹುತೇಕವಾಗಿ ಪೂರ್ಣಗೊಂಡಿದ್ದು ಇದಕ್ಕಾಗಿ ರೂ.244.89 ಕೋಟಿಗಳ ವೆಚ್ಚ ಮಾಡಲಾಗಿದೆ.</td>
</tr>
<tr>
<td>ಊ.</td>
<td>ಮಹದಾಯಿ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು.</td>
<td>ಕಳಸ ನಾಲಾ–ಬಂಡೂರ ನಾಲಾ ತಿರುವು ಯೋಜನೆಗಳಿಗೆ ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯವಿರುವ ಎಲ್ಲಾ ತಿರುವಳಿಗಳನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವ್ಯದು.</td>
</tr>
</table>

ಸಂಖ್ಯೆ:ಜಸಂಇ 203 ಕೆಬಿಎನ್ 2021

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು